**All India Radio: Bangalore**
**National Bulletin In Kannada**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**26.04.2026 19.35 p.m.**
********************

**ಮುಖ್ಯಾಂಶಗಳು**

1. **ಕಲ್ಪಕಂ ಪರಮಾಣು ರಿಯಾಕ್ಟರ್ ಯಶಸ್ಸು, ಜನಗಣತಿ, ಶುದ್ಧ ಇಂಧನ, ಜೀವವೈವಿಧ್ಯತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮನ್ ಕಿ ಬಾತ್ ನಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಪ್ರಸ್ತಾಪ**
2. **ಪ್ರಧಾನಮಂತ್ರಿ ನರೇಂದ್ರ ಮೋದಿ ನಾಳೆಯಿಂದ ಸಿಕ್ಕಿಂ, ಉತ್ತರಪ್ರದೇಶ ಭೇಟಿ – ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ**
3. **ಭಾರತದ ತಾಂತ್ರಿಕ ಸಾಮರ್ಥ್ಯವು ಭವಿಷ್ಯದಲ್ಲಿ ರಾಷ್ಟ್ರದ ಶಕ್ತಿಯನ್ನು ವ್ಯಾಖ್ಯಾನಿಸಲಿದೆ – ಕೇಂದ್ರ ಸಚಿವ ಡಾ.ಜಿತೇಂದ್ರ ಸಿಂಗ್**
4. **ಪಶ್ಚಿಮ ಬಂಗಾಳ ವಿಧಾನಸಭೆಗೆ ಇದೇ ಬುಧವಾರ ಎರಡನೇ ಹಂತದ ಮತದಾನ; ನಾಳೆ ಬಹಿರಂಗ ಪ್ರಚಾರ ಅಂತ್ಯ**
5. **ಐಪಿಎಲ್ ಟಿ–20 ಕ್ರಿಕೆಟ್: ಕೊಲ್ಕತ್ತಾ ನೈಟ್ ರೈಡರ್ಸ್ ಎದುರು ಟಾಸ್ ಗೆದ್ದ ಲಖನೌ ಸೂಪರ್ ಜೈಂಟ್ಸ್ ಫೀಲ್ಡಿಂಗ್ ಆಯ್ಕೆ**

****************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕಲ್ಪಕಂ ಪರಮಾಣು ರಿಯಾಕ್ಟರ್ ಯಶಸ್ಸು, ಜನಗಣತಿ, ಶುದ್ಧ ಇಂಧನ, ಜೀವವೈವಿಧ್ಯತೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಮಹತ್ವದ ವಿಚಾರಗಳನ್ನು ಹಂಚಿಕೊಂಡಿದ್ದಾರೆ.

ಆಕಾಶವಾಣಿಯ ಮಾಸಿಕ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಅವರು, ತಮಿಳುನಾಡಿನ ಕಲ್ಪಕಂ ಕ್ಷಿಪ್ರ ಬ್ರೀಡರ್ ರಿಯಾಕ್ಟರ್ ಘಟಕವು ನಿರ್ಣಾಯಕ ಹಂತ ತಲುಪಿದ್ದು ಭಾರತದ ಪರಮಾಣು ವಿಜ್ಞಾನಿಗಳು ದೇಶದ ಹೆಮ್ಮೆ ಹೆಚ್ಚಿಸಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

ಇಂಧನ ಉತ್ಪಾದನೆಯ ಜೊತೆಗೆ ಈ ಬ್ರೀಡರ್ ರಿಯಾಕ್ಟರ್ ಭವಿಷ್ಯಕ್ಕಾಗಿ ಹೊಸ ಇಂಧನವನ್ನೂ ಉತ್ಪಾದಿಸಲಿದೆ. ದೇಶದ ವಿಜ್ಞಾನಿಗಳು ನಾಗರಿಕ ಪರಮಾಣ ಕಾರ್ಯಕ್ರಮವನ್ನು ಮುನ್ನಡೆಸುತ್ತಿದ್ದು ರಾಷ್ಟ್ರ ನಿರ್ಮಾಣಕ್ಕೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ. ಈ ಪರಮಾಣ ಕಾರ್ಯಕ್ರಮದಿಂದ ಕೃಷಿಯಿಂದ ನವೀನ ಅನ್ವೇಷಣೆಗಳವರೆಗೆ ಎಲ್ಲ ವಲಯಗಳಿಗೂ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.

ದೇಶಾದ್ಯಂತ ಪ್ರಸ್ತುತ ನಡೆಯುತ್ತಿರುವ ಜನಗಣತಿಯ ಬಗ್ಗೆಯೂ ಪ್ರಧಾನಮಂತ್ರಿ ಪ್ರಸ್ತಾಪಿಸಿದ್ದಾರೆ. ವಿಶ್ವದ ಅತಿದೊಡ್ಡ ಜನಸಂಖ್ಯಾ ಲೆಕ್ಕಾಚಾರದ ಪ್ರಕ್ರಿಯೆಯ ಬಗ್ಗೆ ಜನರು ತಿಳಿದಿರಬೇಕು ಎಂದು ಹೇಳುತ್ತಾ, ಈ ಬಾರಿಯ ಜನಗಣತಿ ಪ್ರಕ್ರಿಯೆಯು ಸಂಪೂರ್ಣ ಡಿಜಿಟಲ್ ರೂಪದಲ್ಲಿ ನಡೆಯಲಿದೆ ಎಂದು ವಿವರಿಸಿ, ಜನರು ಸ್ವಯಂಪ್ರೇರಿತವಾಗಿ ಮಾಹಿತಿ ನೀಡಿ ಗಣತಿಗೆ ಸಹಕರಿಸುವಂತೆ ಕರೆ ನೀಡಿದ್ದಾರೆ.

ಈ ಬಾರಿ ಮೇ ತಿಂಗಳು ಬುದ್ಧ ಪೂರ್ಣಿಮೆಯೊಂದಿಗೆ ಆರಂಭವಾಗುತ್ತಿದ್ದು, ಬುದ್ಧನ ಕಾಲಾತೀತ ಸಂದೇಶಗಳನ್ನು ಅರಿತು ಮುನ್ನಡೆಯುವುದು ಈಗಿನ ಜಾಗತಿಕ ಸಂಘರ್ಷದ ಸನ್ನಿವೇಶದಲ್ಲಿ ಅತಿ ಮುಖ್ಯವಾಗಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ.

ಕರ್ನಾಟಕದ ಕರ್ಮ ವಿಹಾರ ಬೌದ್ಧ ಸಂಸ್ಥೆಯನ್ನು ಉಲ್ಲೇಖಿಸಿರುವ ಅವರು, ಸುಮಾರು 100 ಎಕರೆ ವಿಸ್ತೀರ್ಣದಲ್ಲಿ ಈ ರೋಮಾಂಚಕ ಅರಣ್ಯ ಪ್ರದೇಶದಲ್ಲಿ 700 ವಿವಿಧ ಬಗೆಯ ಮರಗಳನ್ನು ಸಂರಕ್ಷಿಸಲಾಗಿದೆ ಎಂದು ತಿಳಿಸಿದರು.

ಈಶಾನ್ಯದಲ್ಲಿ ಬಿದಿರು ವಲಯದ ಯಶಸ್ಸಿನ ಬಗ್ಗೆಯೂ ಪ್ರಧಾನಿ ಅವರು ಮಾತನಾಡಿದರು. ಮೊದಲು ಹೊರೆ ಎಂದು ಭಾವಿಸಲಾಗುತ್ತಿದ್ದ ಈ ವಲಯ ಈಗ ಉದ್ಯೋಗಕ್ಕೆ ಹೊಸ ಅವಕಾಶ ತೆರೆದಿದೆ. ಬ್ರಿಟಿಷರ ನಿಯಮಗಳಿಂದಾಗಿ ಬಿದಿರಿನ ಸಾಗಾಣ ಸುಲಭವಾಗಿರಲಿಲ್ಲ. ಹೀಗಾಗಿ ಜನರು ಈ ಉದ್ಯಮದಿಂದ ದೂರ ಉಳಿದಿದ್ದರು ಎಂದು ಅವರು ಇತಿಹಾಸದ ಘಟನಾವಳಿಗಳನ್ನು ತಿಳಿಸಿದ್ದಾರೆ.

ಭಾರತದ ಹೈನುಗಾರಿಕೆ ವಲಯದಲ್ಲಿ ಮಹತ್ವದ ಪರಿವರ್ತನೆಯಾಗುತ್ತಿದ್ದು ಭಾರತದ ಎರಡು ಚೀಸ್ ಬ್ರಾಂಡ್ ಗಳಿಗೆ ಬ್ರೆಜಿಲ್ ನಲ್ಲಿ ನಡೆದ ಅಂತಾರಾಷ್ಟ್ರೀಯ ಸ್ಪರ್ಧೆಯಲ್ಲಿ ಪ್ರತಿಷ್ಠಿತ ಪ್ರಶಸ್ತಿ ದೊರೆತಿದೆ. ಜಮ್ಮು ಕಾಶ್ಮೀರದ ಕಲಾರಿ ಚೀಸ್, ಸಿಕ್ಕಿಂನ ಚುರ್ಪಿ, ಮಹಾರಾಷ್ಟ್ರದ ಸುರ್ತಿ ಚೀಸ್ ಮೊದಲಾದವುಗಳ ಬಗ್ಗೆ ಅವರು ಮಾಹಿತಿ ಹಂಚಿಕೊಂಡು, ಭಾರತದ ರುಚಿ, ಪರಂಪರೆ ಮತ್ತು ಗುಣಮಟ್ಟವು ಜಗತ್ತಿಗೆ ವಿನೂತನ ಆಹಾರ ಅನುಭವ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ದೇಶಾದ್ಯಂತ ಮೇ 9 ರಂದು ಗುರುದೇವ್ ರಬೀಂದ್ರನಾಥ್ ಟ್ಯಾಗೋರರ ಜನ್ಮ ದಿನ ಆಚರಿಸಲಾಗುವುದು. ಮೇ ತಿಂಗಳು ದೇಶದಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ ಹೋರಾಟಗಾರರನ್ನು ಸ್ಮರಿಸುವ ಮಾಸವಾಗಿದೆ ಎಂದು ವಿವಿಧ ಘಟನಾವಳಿಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ.

ಮಕ್ಕಳು ಬೇಸಿಗೆ ರಜೆಯನ್ನು ಹೊಸತನ್ನು ಕಲಿಯುವ ಮೂಲಕ ಕಳೆಯುವಂತೆ ಕರೆ ನೀಡಿದ್ದಾರೆ. ಬೇಸಿಗೆಯಲ್ಲಿ ಆರೋಗ್ಯದ ಬಗ್ಗೆ ಎಲ್ಲರೂ ಹೆಚ್ಚಿನ ಕಾಳಜಿ ವಹಿಸುವಂತೆಯೂ ಪ್ರಧಾನಮಂತ್ರಿ ನಾಗರಿಕರಲ್ಲಿ ಮನವಿ ಮಾಡಿದ್ದಾರೆ.

****************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಬೇಸಿಗೆಯ ವಾಸ್ತವ್ಯಕ್ಕಾಗಿ ನಾಳೆಯಿಂದ ಐದು ದಿನ ಹಿಮಾಚಲ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ. ಅವರು ಶಿಮ್ಲಾದ ಮಶೋಬ್ರಾದಲ್ಲಿರುವ ರಾಷ್ಟ್ರಪತಿ ನಿವಾಸದಲ್ಲಿ ತಂಗಲಿದ್ದಾರೆ. ಮಂಗಳವಾರ ಶಿಮ್ಲಾದ ಲೋಕಭವನದಲ್ಲಿ ಹಿಮಾಚಲ ಪ್ರದೇಶದ ರಾಜ್ಯಪಾಲರು ಆಯೋಜಿಸಿರುವ ಔತಣಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ರಾಷ್ಟ್ರಪತಿಗಳು ಬುಧವಾರ ಅಟಲ್ ಸುರಂಗಕ್ಕೆ ಭೇಟಿ ನೀಡಲಿದ್ದಾರೆ. ಮರುದಿನ ಅವರು ಪಾಲಂಪುರದಲ್ಲಿರುವ ಚೌಧರಿ ಸರ್ವಣ್ ಕುಮಾರ್ ಹಿಮಾಚಲ ಪ್ರದೇಶ ಕೃಷಿ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿಯೂ ಭಾಗಿಯಾಗಲಿದ್ದಾರೆ.

ಅದೇ ದಿನ, ರಾಷ್ಟ್ರಪತಿಗಳು ಮಶೋಬ್ರಾದಲ್ಲಿರುವ ರಾಷ್ಟ್ರಪತಿ ನಿವಾಸದಲ್ಲಿ ಔತಣಕೂಟ ಆಯೋಜಿಸಿದ್ದಾರೆ. ತಮ್ಮ ಪ್ರವಾಸದ ಕೊನೆಯ ದಿನವಾದ ಮೇ 1 ರಂದು ಶಿಮ್ಲಾದಲ್ಲಿರುವ ಸೇನಾ ತರಬೇತಿ ಕಮಾಂಡ್‌ಗೆ ಭೇಟಿ ನೀಡಲಿದ್ದಾರೆ.

****************

ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ನಾಳೆಯಿಂದ ಎರಡು ದಿನ ಆಂಧ್ರಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ.
ಈ ಭೇಟಿಯ ಸಮಯದಲ್ಲಿ ಅವರು, ನಾಳೆ ವಿಶಾಖಪಟ್ಟಣಂನಲ್ಲಿರುವ ಆಂಧ್ರ ವಿಶ್ವವಿದ್ಯಾಲಯದ ಶತಮಾನೋತ್ಸವ ಸಮಾರಂಭದಲ್ಲಿ ಭಾಗಿಯಾಗಲಿದ್ದಾರೆ.

****************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಾಳೆಯಿಂದ ಎರಡು ದಿನ ಸಿಕ್ಕಿಂಗೆ ಭೇಟಿ ನೀಡಲಿದ್ದಾರೆ. ಸಿಕ್ಕಿಂನ ಪರಿಸರ ಮತ್ತು ಪುಷ್ಪ ಪರಂಪರೆಯನ್ನು ಪ್ರದರ್ಶಿಸುತ್ತಾ ವಿಶ್ವದರ್ಜೆಯ ಆರ್ಕಿಡ್ ಅನುಭವ ನೀಡುವ ಗ್ಯಾಂಗ್ಟಾಕ್‌ನಲ್ಲಿರುವ ಆರ್ಕಿಡೇರಿಯಂಗೆ ಅವರು ಮಂಗಳವಾರ ಭೇಟಿ ನೀಡಲಿದ್ದಾರೆ.

ಸಿಕ್ಕಿಂನ 50ನೇ ರಾಜ್ಯ ಸಂಸ್ಥಾಪನಾ ದಿನಾಚರಣೆಯ ಸಮಾರೋಪ ಸಮಾರಂಭದಲ್ಲಿ ಭಾಗಿಯಾಗಿ ರಾಜ್ಯಾದ್ಯಂತದ ನಾಲ್ಕು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಮೌಲ್ಯದ ಬಹು ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಮೂಲಸೌಕರ್ಯ, ಸಂಪರ್ಕ, ಆರೋಗ್ಯ ರಕ್ಷಣೆ, ಶಿಕ್ಷಣ, ವಿದ್ಯುತ್, ನಗರಾಭಿವೃದ್ಧಿ, ಪರಿಸರ, ಪ್ರವಾಸೋದ್ಯಮ, ಕೃಷಿ ಸೇರಿದಂತೆ ವಿವಿಧ ಕ್ಷೇತ್ರಗಳ ಬಹುಯೋಜನೆಗಳು ಸಮಗ್ರ ಅಭಿವೃದ್ಧಿಯನ್ನು ವೇಗಗೊಳಿಸುವ ಗುರಿ ಹೊಂದಿವೆ.

****************

ಪ್ರಧಾನಮಂತ್ರಿ ನರೇಂದ್ರ ಮೋದಿ ಮಂಗಳವಾರದಿಂದ ಎರಡು ದಿನ ಉತ್ತರ ಪ್ರದೇಶಕ್ಕೆ ಭೇಟಿ ನೀಡಲಿದ್ದಾರೆ.

ಮೊದಲ ಚರಣದಲ್ಲಿ ಅವರು, ವಾರಾಣಸಿಯಲ್ಲಿ ಮಹಿಳಾ ಸಮ್ಮೇಳನದಲ್ಲಿ ಭಾಗಿಯಾಗಲಿದ್ದಾರೆ. ಅಲ್ಲಿ ಅವರು ಆರು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ.

ಬನಾರಸ್–ಪುಣೆ ಮತ್ತು ಅಯೋಧ್ಯೆ–ಮುಂಬೈ ನಡುವಣ ಎರಡು ಹೊಸ ಅಮೃತ್ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಹಸಿರು ನಿಶಾನೆ ತೋರಲಿದ್ದಾರೆ.

ಬುಧವಾರದಂದು ಅವರು, ಕಾಶಿ ವಿಶ್ವನಾಥ ದೇವಸ್ಥಾನದಲ್ಲಿ ಪ್ರಾರ್ಥನೆ  ಸಲ್ಲಿಸಲಿದ್ದಾರೆ.

ಭೇಟಿಯ ಎರಡನೇ ಚರಣದಲ್ಲಿ ಪ್ರಧಾನಮಂತ್ರಿಗಳು ಬುಧವಾರದಂದು ಹಾರ್ದೋಯ್‌ನಲ್ಲಿ ಗಂಗಾ ಎಕ್ಸ್‌ಪ್ರೆಸ್‌ವೇಯನ್ನು ಲೋಕಾರ್ಪಣೆ ಮಾಡಲಿದ್ದಾರೆ. ಇದು 594 ಕಿಲೋಮೀಟರ್ ಉದ್ದದ, 6 ಪಥದ ಪ್ರವೇಶ–ನಿಯಂತ್ರಿತ ಗ್ರೀನ್‌ಫೀಲ್ಡ್ ಹೈ–ಸ್ಪೀಡ್ ಕಾರಿಡಾರ್ ಅನ್ನು ಸುಮಾರು ಮೂವತ್ತಾರು ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಶಹಜಹಾನ್‌ಪುರ ಜಿಲ್ಲೆಯಲ್ಲಿ ಮೂರುವರೆ ಕಿಲೋಮೀಟರ್ ಉದ್ದದ ತುರ್ತು ಲ್ಯಾಂಡಿಂಗ್ ಸೌಲಭ್ಯ ಒದಗಿಸಿರುವುದು ಈ ಯೋಜನೆಯ ಪ್ರಮುಖ ಅಂಶವಾಗಿದೆ.

****************

ಭಾರತದ ತಾಂತ್ರಿಕ ಸಾಮರ್ಥ್ಯವು ಮುಂಬರುವ ದಶಕಗಳಲ್ಲಿ ರಾಷ್ಟ್ರದ ತಂತ್ರಜ್ಞಾನ ಶಕ್ತಿಯನ್ನು ವ್ಯಾಖ್ಯಾನಿಸಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿ ನಡೆದ ಅಖಿಲ ಐಐಟಿ ಹಳೆಯ ವಿದ್ಯಾರ್ಥಿಗಳ ಸಮ್ಮೇಳನ ಉದ್ದೇಶಿಸಿ ವರ್ಚುಯಲ್ ರೂಪದಲ್ಲಿ ಮಾತನಾಡಿದ ಅವರು, ಭಾರತವು ನಿರ್ಣಾಯಕ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಬೇಕೆಂದು ಕರೆ ನೀಡಿದರು.

ದೇಶವು ತಂತ್ರಜ್ಞಾನದ ಗ್ರಾಹಕನಾಗುವುದನ್ನು ಮೀರಿ ಸೃಜನಕರ್ತ, ವಿನ್ಯಾಸಕನಾಗುವತ್ತ ಮುನ್ನಡೆಯಲು ಶೈಕ್ಷಣಿಕ ವಲಯ, ಕೈಗಾರಿಕೆಗಳು ಮತ್ತು ಸರ್ಕಾರದೊಂದಿಗೆ ಹೆಚ್ಚಿನ ಸಹಯೋಗದ ಅಗತ್ಯವನ್ನು ಸಚಿವರು ಒತ್ತಿ ಹೇಳಿದರು.

ಭಾರತ ಮತ್ತು ಜಾಗತಿಕ ನಾವೀನ್ಯತೆ ಪರಿಸರ ವ್ಯವಸ್ಥೆಗಳ ನಡುವಿನ ಪ್ರಮುಖ ಸಂಪರ್ಕಕಾರರು ಅನಿವಾಸಿ ಭಾರತೀಯರು ಎಂದು ಐಐಟಿ ಹಳೆಯ ವಿದ್ಯಾರ್ಥಿಗಳ ಪಾತ್ರವನ್ನು ಬಣ್ಣಿಸಿದರು.

****************

ಪಶ್ಚಿಮ ಬಂಗಾಳ ವಿಧಾನಸಭೆಯ ಎರಡನೇ ಮತ್ತು ಅಂತಿಮ ಹಂತದ ಚುನಾವಣೆಗಾಗಿ ಪ್ರಚಾರ ನಾಳೆ ಮುಕ್ತಾಯಗೊಳ್ಳಲಿದ್ದು, ರಾಜಕೀಯ ನಾಯಕರು ಮತದಾರರನ್ನು ಸೆಳೆಯಲು ವಿವಿಧ ಬಗೆಯ ಕಸರತ್ತು ನಡೆಸಿದ್ದಾರೆ. ಬುಧವಾರದಂದು ಎರಡನೇ ಹಂತದ ಮತದಾನ ನಡೆಯಲಿದೆ.

ಬಿಜೆಪಿ ಹಿರಿಯ ನಾಯಕ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಉತ್ತರ 24 ಪರಗಣ ಜಿಲ್ಲೆಯ ಬಂಗಾವ್‌ನಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಬಿಜೆಪಿ ನಾಯಕ ಅಮಿತ್ ಶಾ ಕೂಡ ಇಂದು ಪ್ರಚಾರದಲ್ಲಿದ್ದು, ತೆಹಟ್ಟಾ, ನಾಡಿಯಾ ಮತ್ತು ಅನುಲಿಯಾದಲ್ಲಿ ನಡೆದ ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಿದರು.

ತೃಣಮೂಲ ಕಾಂಗ್ರೆಸ್ ಅಧ್ಯಕ್ಷೆ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಸ್ವಂತ ಕ್ಷೇತ್ರವಾದ ಭಬಾನಿಪುರದಲ್ಲಿ ವಿವಿಧ ಕಾರ್ಯಕ್ರಮಗಳನ್ನು ಪಾಲ್ಗೊಂಡರು. ಪಕ್ಷದ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಮಗ್ರಹತ್ ಪಶ್ಚಿಮದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದರು.

****************

ಚೆನ್ನೈನಲ್ಲಿ ನಡೆದ ದಿನದ ಮೊದಲ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡ 8 ವಿಕೆಟ್‌ಗಳ ಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 158 ರನ್ ಗಳಿಸಿತು. ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ ತಂಡ 16.4 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಿತು.

ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮತ್ತೊಂದು ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಮತ್ತು ಕೊಲ್ಕತ್ತಾ ನೈಟ್ ರೈಡರ್ಸ್ ಮುಖಾಮುಖಿಯಾಗಿದೆ.

ಟಾಸ್ ಗೆದ್ದ ಲಖನೌ ಸೂಪರ್ ಜೈಂಟ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.

********ಮುಕ್ತಾಯ********